ನಿಮ್ಮೊಡನೆ

# ಮನೆಕೆಲಸಕ್ಕೆ ಮಕ್ಕಳೇಕೆ?

**ನಗರ** ಪ್ರದೇಶಗಳ ಶ್ರೀಮಂತರು ಮತ್ತು ಮೇಲ್ಮಧ್ಯಮ ವರ್ಗದವರು ತಮ್ಮ ಮನೆಗಳಲ್ಲಿ ಸಣ್ಣ ವಯಸ್ಸಿನ ಮಕ್ಕಳನ್ನು ದುಡಿಸಿಕೊಳ್ಳುವ ಪ್ರವೃತ್ತಿ ಹೊಸದಲ್ಲ. ಹೀಗೆ ದುಡಿಯಲು ಬಂದವರಲ್ಲಿ ಹಳ್ಳಿಗಾಡಿನ ಬಾಲಕಿಯರೇ ಹೆಚ್ಚು. ಮನೆ ಕೆಲಸ ಮಾಡುವ ಮಕ್ಕಳಿಗೆ ಸರಿಯಾಗಿ ಊಟ ಕೊಡದೆ, ದೈಹಿಕ ಹಿಂಸೆ ನೀಡುವ ಪ್ರಕರಣಗಳು ಬೆಂಗಳೂರು ಮತ್ತಿತರ ನಗರಗಳಲ್ಲಿ ಆಗಾಗ ಬೆಳಕಿಗೆ ಬರುತ್ತವೆ. ಅಂತಹ ಸಂದರ್ಭಗಳಲ್ಲಿ ಹಿಂಸೆಗೆ ಒಳಗಾದ ಮಕ್ಕಳ ಬಗ್ಗೆ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳಿಂದ ಸಹಾನುಭೂತಿ ವ್ಯಕ್ತವಾಗುತ್ತದೆ. ಮಕ್ಕಳನ್ನು ಹಿಂಸಿಸಿದವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಗಳೂ ಕೇಳಿ ಬರುತ್ತವೆ. ಹಿಂಸೆ ನೀಡಿದವರ ಮೇಲೆ ಪೊಲೀಸರು ದೂರು ದಾಖಲಿಸಿಕೊಳ್ಳುತ್ತಾರೆ. ತನಿಖೆಯೂ ನಡೆಯುತ್ತದೆ. ದುರದೃಷ್ಟದ ಸಂಗತಿ ಎಂದರೆ ಅಪರಾಧಿಗಳಿಗೆ ಶಿಕ್ಷೆ ಆಯಿತೇ, ಇಲ್ಲವೇ ಎನ್ನುವುದು ಮಾತ್ರ ಬೆಳಕಿಗೆ ಬರುವುದಿಲ್ಲ. ಮತ್ತೊಂದು ಹೊಸ ಪ್ರಕರಣ ಬಹಿರಂಗಗೊಳ್ಳುವವರೆಗೆ ಮನೆಗೆಲಸದ ಮಕ್ಕಳ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ.

ಮಹಾನಗರಗಳ ಸುಶಿಕ್ಷಿತ, ಸಣ್ಣ ಕುಟುಂಬಗಳಲ್ಲಿ ಗಂಡ– ಹೆಂಡತಿ ಇಬ್ಬರೂ ದುಡಿಯಲೇಬೇಕಾದ ಅನಿವಾರ್ಯತೆ ಇದೆ. ಇಂತಹ ಕುಟುಂಬಗಳವರ ಪುಟ್ಟ ಮಕ್ಕಳನ್ನು ಶಾಲೆಗೆ ಕಳುಹಿಸುವುದು, ಕರೆ ತರುವುದು ಇತ್ಯಾದಿ ಕೆಲಸಕ್ಕೆ ಬೇರೆಯವರನ್ನು ಅವಲಂಬಿಸುವ ಅನಿವಾರ್ಯ ಇದೆ. ಅದಕ್ಕಾಗಿ ಸಂಬಂಧಿಗಳ ಇಲ್ಲವೇ ಪರಿಚಯದವರ ಮಕ್ಕಳನ್ನು ಇಂತಹ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಕೆಲಸದ ಹುಡುಗರಿಂದ ಮನೆಯ ಕಾವಲು ಸೇರಿದಂತೆ ಎಲ್ಲಾ ಚಾಕರಿಗಳನ್ನು ಮಾಡಿಸುವವರೂ ಇದ್ದಾರೆ. ಮಕ್ಕಳನ್ನು ಇಂತಹ ಕೆಲಸಕ್ಕೆ ಕಳುಹಿಸುವ ಬಹುತೇಕ ತಂದೆ ತಾಯಿಗಳು ಕಡು ಬಡವರು. ತಮ್ಮ ಮಕ್ಕಳಿಗೆ ಎರಡು ಹೊತ್ತಿನ ಊಟ, ಬಟ್ಟೆಯಾದರೂ ಸಿಗಲಿ ಎಂಬ ಉದ್ದೇಶದಿಂದ ದುಡಿಯಲು ಕಳುಹಿಸುತ್ತಾರೆ. ಮನೆ ಕೆಲಸದ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವವರು ವಿರಳ. ಬಹುತೇಕ ಜನರು ಕೆಲಸದವರ ವರ್ತನೆಗಳನ್ನು ಸದಾ ಅನುಮಾನದಿಂದ ನೋಡುತ್ತಾರೆ. ಪ್ರತಿಯೊಂದರಲ್ಲೂ ತಪ್ಪು ಹುಡುಕುತ್ತಾರೆ. ಅವರನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುವ ಪ್ರಯತ್ನವಾಗಿ ಹಿಂಸಿಸುವ ಮನಸ್ಥಿತಿ ಬೆಳೆಸಿಕೊಳ್ಳುತ್ತಾರೆ. ಕೆಲಸದ ಹುಡುಗರಿಗೆ ಬರೆ ಹಾಕುತ್ತಾರೆ. ಮೈ ಮೇಲೆ ಬಿಸಿ ನೀರು ಸುರಿಯುತ್ತಾರೆ. ಸಕಾಲದಲ್ಲಿ ಊಟ, ತಿಂಡಿ ಕೊಡದೆ ಸತಾಯಿಸುತ್ತಾರೆ. ಕೆಲಸ ಬಿಟ್ಟು ಹೋಗದಂತೆ ತಡೆಯಲು ಅವರನ್ನು ಕೂಡಿ ಹಾಕುತ್ತಾರೆ. ಇಂತಹ ವರ್ತನೆಗಳಿಂದ ಮಕ್ಕಳು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ. ನಾಲ್ಕು ಗೋಡೆಗಳ ನಡುವೆ ನಡೆಯುವ ದೌರ್ಜನ್ಯ, ಅಮಾನವೀಯ ನಡವಳಿಕೆಗಳು ಸಮಾಜದ ಗಮನಕ್ಕೆ ಬರುವುದೇ ಇಲ್ಲ. ಮಕ್ಕಳನ್ನು ಮನೆ ಕೆಲಸಕ್ಕೆ ಇಟ್ಟುಕೊಂಡವರು ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸುವ ವ್ಯವಸ್ಥೆಯೂ ನಮ್ಮಲ್ಲಿಲ್ಲ. ಇದು ಮಕ್ಕಳ ಕಲ್ಯಾಣ ಇಲಾಖೆಯ ಜವಾಬ್ದಾರಿ. ಆದರೆ ಇಲಾಖೆ ಈ  ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ದೌರ್ಜನ್ಯಗಳ ವಿರುದ್ಧ ದೂರು ನೀಡಿದ ಸಂದರ್ಭಗಳಲ್ಲಿ ಪೊಲೀಸರು ವಿಚಾರಣೆ ನಡೆಸುತ್ತಾರೆ. ಇಲ್ಲವಾದರೆ ಅವರೂ ಅಸಹಾಯಕರು.

ದುರದೃಷ್ಟದ ಸಂಗತಿ ಎಂದರೆ ಬಹುತೇಕ ತಂದೆ ತಾಯಿಗಳಿಗೆ ಮಕ್ಕಳ ದುಡಿಮೆಯ ಹಣ ಮಾತ್ರ ಬೇಕು. ಅವರ ಕಷ್ಟ ಸುಖಗಳನ್ನು ಕೇಳುವ ಸ್ಥಿತಿಯಲ್ಲಿರುವುದಿಲ್ಲ. ಮನೆ ಕೆಲಸಕ್ಕೆ ಸೇರಿಕೊಂಡ ಮಕ್ಕಳೆಲ್ಲ ದೌರ್ಜನ್ಯಕ್ಕೆ ಒಳಗಾಗುತ್ತಾರೆ ಎನ್ನಲಾಗದು ಎಂಬ ವಾದವೂ ಇದೆ. ಆದರೆ ಇಲ್ಲಿ  ಪ್ರಶ್ನೆ ಅದಲ್ಲ; ಮಕ್ಕಳನ್ನು ಕಾರ್ಮಿಕರನ್ನಾಗಿ ನೇಮಿಸಿಕೊಳ್ಳುವುದೇ ಅಪರಾಧ ಎನ್ನುವುದನ್ನು ಜನರು ಮನಗಾಣಬೇಕು. ಸಂಬಂಧಿಕರ ಅಥವಾ ಗೊತ್ತಿರುವವರ ಮಕ್ಕಳನ್ನು ಹಾಗೆಯೇ ಮನೆಯಲ್ಲಿ ಊಟ– ತಿಂಡಿ ಕೊಟ್ಟು ಇರಿಸಿಕೊಳ್ಳುವುದಾದರೂ ಆ ಮಕ್ಕಳ ಶಿಕ್ಷಣ, ಮೂಲಸೌಲಭ್ಯಗಳನ್ನು ನೋಡಿಕೊಳ್ಳುವುದು ಕರ್ತವ್ಯ. ಬಹುತೇಕ ಬಡಮಕ್ಕಳ ಬಾಲ್ಯ ಅನ್ಯರ ಮನೆಚಾಕರಿಯಲ್ಲೇ ಕಳೆದು ಹೋಗುತ್ತಿದೆ. ಮನೆ ಕೆಲಸ ಮಾಡುವ ಮಕ್ಕಳ ಸಂಖ್ಯೆ ಎಷ್ಟು ಎಂಬ ಅಂಕಿ ಅಂಶವೂ ಮಕ್ಕಳ ಕಲ್ಯಾಣ ಇಲಾಖೆಯ ಬಳಿ ಇದ್ದಂತಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಮಕ್ಕಳಿಗೆ ಹಿಂಸೆ ನೀಡಿದ ಪ್ರಕರಣಗಳ ತ್ವರಿತ ವಿಚಾರಣೆ ನಡೆದು ಆರೋಪ ಸಾಬೀತಾದರೆ ಸಂಬಂಧಿಸಿದವರಿಗೆ ಶಿಕ್ಷೆ ಆಗಬೇಕು. ಅದು ಸಾರ್ವಜನಿಕರ ಗಮನಕ್ಕೆ ಬರಬೇಕು. ತನ್ಮೂಲಕ ಎಳೆಯ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಪ್ರವೃತ್ತಿಗೆ ಕಡಿವಾಣ ಬೀಳಬೇಕು.

■ ಪಿ.ಕೆ. ಹರಿಯಬ್ಬೆ

ದುರದೃಷ್ಟದ ಸಂಗತಿ ಎಂದರೆ ಬಹುತೇಕ ತಂದೆ ತಾಯಿಗಳಿಗೆ ಮಕ್ಕಳ ದುಡಿಮೆಯ ಹಣ ಮಾತ್ರ ಬೇಕು. ಅವರ ಕಷ್ಟ ಸುಖಗಳನ್ನು ಕೇಳುವ ಸ್ಥಿತಿಯಲ್ಲಿರುವುದಿಲ್ಲ. ಮನೆ ಕೆಲಸಕ್ಕೆ ಸೇರಿಕೊಂಡ ಮಕ್ಕಳೆಲ್ಲ ದೌರ್ಜನ್ಯಕ್ಕೆ ಒಳಗಾಗುತ್ತಾರೆ ಎನ್ನಲಾಗದು ಎಂಬ ವಾದವೂ ಇದೆ. ಆದರೆ ಇಲ್ಲಿ  ಪ್ರಶ್ನೆ ಅದಲ್ಲ; ಮಕ್ಕಳನ್ನು ಕಾರ್ಮಿಕರನ್ನಾಗಿ ನೇಮಿಸಿಕೊಳ್ಳುವುದೇ ಅಪರಾಧ ಎನ್ನುವುದನ್ನು ಜನರು ಮನಗಾಣಬೇಕು.



ವಿಷ್ಣು